**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಶೃಂಗೇರಿ**

**ಸಿ.ಸಿ. ನಂ:105/2022**

ಫಿರ್ಯಾದುದಾರರು : ಶಶಾಂಕ್ ಎಂ.ಸಿ,
ಬಿನ್. ಚಂದ್ರಪ್ಪ ಮಲ್ನಾಡ್,
ವಯಸ್ಸು ಸುಮಾರು 27 ವರ್ಷ,
ವಾಸಃ ಮಲ್ನಾಡ್,
ತೆಕ್ಕೂರು ಅಂಚೆ,
ಶೃಂಗೇರಿ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

-ವಿರುದ್ಧ -

ಆರೋಪಿ : ನವೀನ್ ಕೆ.ಎನ್,
ಬಿನ್. ನಾಗಭೂಷಣ್ ಕೆ.ಎಂ,
ವಯಸ್ಸು ಸುಮಾರು **31** ವರ್ಷ,
ವಾಸಃ ಮೇಲಿನ ಕುರುವಳ್ಳಿ,
ತೀರ್ಥಹಳ್ಳಿ ಅಂಚೆ ,
ತೀರ್ಥಹಳ್ಳಿ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ.

*****

**ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿಯ ಹೇಳಿಕೆ**

ಪ್ರಶ್ನೆ.1 : ಫಿರ್ಯಾದುದಾರರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ?
ಉತ್ತರ : Heard & Understood.

ಪ್ರಶ್ನೆ.2 :ಪ್ರಾ.ಸಾ-1 ಶ್ರೀ ಶಶಾಂಕ್ ಎಂ.ಸಿ, ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಯಾದ ನೀವು ಮತ್ತು ಫಿರ್ಯಾದುದಾರರು ಪರಿಚಯಸ್ಥರಾಗಿದ್ದು, ಆ ಸಂಬಂಧ ದಿನಾಂಕಃ17-08-2021 ರಂದು ನರಸಿಂಹರಾಜಪುರದಲ್ಲಿನ ಅಮೋಘ ಅಗ್ರಿಟೆಕ್ ಕೃಷಿ ಯಂತ್ರೋಪಕರಣ ಮಾರಾಟ ಮಳಿಗೆ ಅಭಿವೃದ್ಧಿಗಾಗಿ ಫಿರ್ಯಾದುದಾರರಿಂದ **ರೂ.3,25,000-00** ರೂಗಳ ಸಾಲವನ್ನು ಕೋರಿದ್ದು, ಈ ಸಂಬಂಧ ಆರೋಪಿಯಾದ ನಿಮ್ಮ ಬ್ಯಾಂಕ್ ಖಾತೆಗೆ ಫಿರ್ಯಾದುದಾರರು ಅವರ ಕರ್ನಾಟಕ ಬ್ಯಾಂಕ್ ಶೃಂಗೇರಿ ಶಾಖೆ ಖಾತೆಯಿಂದ ಆರ್.ಟಿ. ಜಿ. ಎಸ್. ಮೂಲಕ ದಿನಾಂಕಃ17-08-2021 ರಲ್ಲಿ ರೂ.3,25,000-00 ಹಣವನ್ನು ಆರೋಪಿಯಾದ ನಿಮ್ಮ ಫೆಡೆರಲ್ ಬ್ಯಾಂಕ್, ನರಸಿಂಹರಾಜಪುರ ಶಾಖೆಯ ಖಾತೆಗೆ ವರ್ಗಾವಣೆ ಮಾಡಿರುತ್ತಾರೆ ಎಂದು ಹೇಳಿದ್ದಾರೆ, ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರ : False

ಪ್ರಶ್ನೆ.3 :ಪ್ರಾ.ಸಾ.1 ರವರು ಮುಂದುವರೆದು ಫಿರ್ಯಾದುದಾರರು ನೀವು ಮೇಲ್ಕಂಡ ವಿಚಾರಕ್ಕೆ ಸಂಬಂಧಿಸಿದಂತೆ ಸಾಲದ ಮರುಪಾವತಿಗೆ ಆರೋಪಿಯಾದ ನಿಮ್ಮ ಫೆಡೆರಲ್ ಬ್ಯಾಂಕ್, ನರಸಿಂಹರಾಜಪುರ ಶಾಖೆಯ **ಚೆಕ್ ಸಂಖ್ಯೆ:10081191** ನಲ್ಲಿ ದಿನಾಂಕಃ18-03-2022 ವನ್ನು

Naveena.K.N.

24/4/24

**ರೂ.3,25,000-00** ಗಳಿಗೆ ಸಾಲದ ಹಣ ಸಂದಾಯ ಆಗುವಂತೆ ಚೆಕ್ ನ್ನು ಸಾಲದ ಹಣ ಮರುಪಾವತಿಸುವ ಸಲುವಾಗಿ ನೀಡಿರುತ್ತಾರೆ ಎಂದು ಹೇಳಿದ್ದಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ : False

ಪ್ರಶ್ನೆ.4 : ಫ್ರಾಸಾ.1 ರವರು ಮುಂದುವರೆದು ಮೇಲೆ ತಿಳಿಸಿದ ಚೆಕ್ಕನ್ನು ನಗದೀಕರಣಕ್ಕಾಗಿ ಅವರ ಕರ್ನಾಟಕ ಬ್ಯಾಂಕ್, ಶೃಂಗೇರಿ ಶಾಖೆಯ ಖಾತೆಗೆ ಹಾಜರುಪಡಿಸಿದಾಗ ಬ್ಯಾಂಕಿನವರು ನಿಮ್ಮ ಬ್ಯಾಂಕ್ ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂಬ ಹಿಂಬರಹದೊಂದಿಗೆ ಚೆಕ್ಕನ್ನು ದಿನಾಂಕ: 23.03.2022 ರಂದು ಹಿಂದಿರುಗಿಸಿದ್ದು, ನೀವು ನೀಡಿದ ಚೆಕ್ಕು ತಿರಸ್ಕೃತಗೊಂಡಿರುತ್ತದೆ ಎಂದು ಹೇಳಿದ್ದಾರೆ ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ: False

ಪ್ರಶ್ನೆ.5:ಫ್ರಾಸಾ.1 ರವರು ಮುಂದುವರೆದು ಈ ಬಗ್ಗೆ ನಿಮಗೆ ವಕೀಲರ ಮೂಲಕ ದಿನಾಂಕ:**12-04-2022** ರಂದು ನೋಟಿಸನ್ನು ನೀಡಿ, ಸದರಿ ನೋಟಿಸ್ ತಲುಪಿದ 15 ದಿನಗಳೊಳಗೆ ಹಣ ಮರುಪಾವತಿ ಮಾಡಬೇಕೆಂದು ತಿಳಿಸಿದರೂ ಸಹ ಆರೋಪಿಯಾದ ನೀವು ಸದರಿ ಚೆಕ್ಕಿನ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎಂದು ಹೇಳಿದ್ದಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ : False

ಪ್ರಶ್ನೆ.6 : ಫ್ರಾಸಾ.1 ರವರು ಮುಂದುವರೆದು ಆರೋಪಿತರಾದ ನೀವು ಮೋಸ ಮಾಡಬೇಕೆನ್ನುವ ಉದ್ದೇಶದಿಂದಲೇ ಈ ರೀತಿಯ ಚೆಕ್ಕನ್ನು ಅವರಿಗೆ ಕೊಟ್ಟಿರುತ್ತೀರಿ ಆದುದರಿಂದ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಎಂದು ಹೇಳಿದ್ದಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರ : False

ಪ್ರಶ್ನೆ.7 : ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ?

ಉತ್ತರ : Not at this moment

ಪ್ರಶ್ನೆ.8 : ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

ಉತ್ತರ : Yes

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

**ದಿನಾಂಕ :** 29/4/24

[signature] 29/4/24

**(ರಾಹುಲ್ ಶೆಟ್ಟಿ ಗಾರ್ )**
**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ಶೃಂಗೇರಿ.**

Naveena.K.N.
**ಆರೋಪಿಯ ಸಹಿ:**